Under law he can summon anybody if he feels that the former DC is to be summoned to tender evidence.

ಆ ದೃಷ್ಟಿಯಿಂದಲೇ ಟಚ್ ಮಾಡುವುದು ಬೇಡ ಅಂತ ಹೇಳಿ ಆ ವಿವರಗಳಿಗೆ ನಾನು ಹೋಗಿಲ್ಲಲ. ಈ ಸಂದರ್ಭದಲ್ಲಿ ಗನ್‌ಮ್ಯಾನ್‌ದು ಜವಾಬ್ದಾರಿ ಏನು ಮತ್ತೊಂದೇನು I am sorry, that is a different aspect. ಆ ಗನ್‌ಮ್ಯಾನ್ ಏನು ಮಾಡಬೇಕು ಏನು ಮಾಡಬಾರದು ಅನ್ನೋದಕ್ಕೆ ಮ್ಯಾನುಯಲ್ ಇರುತ್ತದೆ ಅದನ್ನೆಲ್ಲಾ ಪರೇಟಾಗಿ ತೆಗೆದುಕೊಳ್ಳೋಣ. ಈಗಾಗಲೇ ಜ್ಯಾಯಾಂಗ ತನಿಖೆಗೆ ನಾವು ಆಜ್ಞೆ ಮಾಡಿದ್ದೇವೆ. That is also the subject matter for enquiry under the terms of reference.

ನಾಳೆ ಆದೂ ಬರಲಿ, ಮಾನ್ಯುಯಲ್ ಕ್ಲಿಯರಾಗಿದ್ದಾಗ ಡೌಟ್ ಮಾಡಲು ಬರುವುದಿಲ್ಲ. ಆಮೇಲೆ ಡೆಲ್ಲಿಗೆ ಹೋಗಿ ಬಂದಮೇಲೆ ಸ್ಟೇಟ್‌ಮೆಂಟ್ ಕೊಟ್ಟೆ ಪ್ರೆಸ್‌ನಲ್ಲಿ ಪ್ರಶ್ನೆ ಹೇಗೆ ಕೇಳ್ತಾರೆ ಏನು ಉತ್ತರ ನಾವು ಕೊಡ್ತೀವಿ ಅನ್ನೋದರ ಮೇಲೆ ಅವರು ಹೇಗೆ ಬರೀತರೆ ಎಂಬುದು ತಮಗೆ ಗೊತ್ತಲ್ಲಾ, ಅಫ್ಕೋರಾಲ್ ಚುನಾವಣೆ ಚುನಾವಣಾ ಕಮೀಷನ್‌ಗೆ ಸಂಬಂಧಿಸಿದ್ದು ಏನು ನಡೀತು ಅನ್ನತಕ್ಕದ್ದು; ಅವರು ಕೇಳತಕ್ಕದ್ದು the is the Hon'ble Prime Minister of the entire country. ಅವರು ಕೇಳಿದಾಗ ನಾನು ಮುಖ್ಯಮಂತ್ರಿಯಾಗಿ ಹೇಳುವುದೂ ಕೂಡ ಕೆಲವು ಸಲ ಬರುತ್ತದೆ. ಬಂದ ಮೇಲೂ ವಿಚಾರ ಮಾಡಿಯೇ ನಾನು ಹೇಳಿದ್ದೇನೆ. ವಿನಃ ನೇರವಾಗಿ ಸಂಬಂಧಪಟ್ಟಿದ, ಅವರನ್ನು ಕೇಳಿ ಇಲ್ಲಿ ಅಡಳಿತ ನಡೆಸ್ತೆದ್ದೇನೆ ಅಂತ ಅಭಿಪ್ರಾಯ ತಾವು ಹೇಳಿದ್ದೀರಿ. ಹಾಗಲ್ಲ. ನಾನು ಹೇಳಿದ್ದು ಈ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದೇನೆ ಅನ್ನತಕ್ಕ ಮಾತು. ಆಮೇಲೆ ಚಂದ್ರೇಗೌಡರೇ, ಯಾವುದೇ ಕೇಸ್ ರಿಜಿಸ್ಟ್ರಾಗೋದ್ರಿಂದ ಹಿಡಿದು ಇನ್‌ವೆಸ್ಟಿಗೇಷನ್ ನಡೆದು ಮುಕ್ತಾಯವಾಗುವುದು ಯಾವಾಗ either through a judicial enquiry of as a result of a fair investigation or the matter taken to a court of law by filing a charge sheet, then only after getting the judgement from the concerned court. ಅಲ್ಲಿಯವರೆಗೆ ಯಾರೂ ಏನೂ ಮಾಡುವುದಕ್ಕೆ ಬರುವುದಿಲ್ಲ ಆ ಕಾನೂನಿನ ಪ್ರಕಾರವೇ ನಾವು ಹೋಗ್ತೇವೆ. That is the law of the land is who rule of law. ಅದನ್ನು ಬಿಟ್ಟು ನಾವ್ಯಾರೂ ಹೋಗುವುದಿಲ್ಲ, ಕಂಪ್ಲೇಂಟ್ ಮತ್ತೊಂದನ್ನು ಯಾರು ಕೊಡಿಸಿದರು ಎಂಬ ಬಗ್ಗೆ ನಾನು ಹೋಗುವುದಿಲ್ಲ; ರಾಮಯ್ಯನವರು ಅದರ ವಿಚಾರ ಹೇಳಿದ್ದಾರೆ, ಅದ್ಯಾರೋ ತುಮಕೂರಿನವರ ಮತ್ತೊಬ್ಬರ ಕೈಲಿ ಕೊಡಿಸಿದರು ಅಂತ, ತಾವೇ ಮಾಡಿದರಿ ಅಂತ ಪ್ರಶ್ನೆ ಇಲ್ಲ; ಯಾರು ಕೊಟ್ಟಿದ್ದಾರೆ ಯಾರು ಬಿಟ್ಟಿದ್ದಾರೆ ಅಷ್ಟೂ ಕೂಡ ತನಿಖೆಗೆ ಬರಲಿ. ಇಷ್ಟು ಜೇಳಿ ಅಧ್ಯಕ್ಷರೇ.....

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಈ ರಾಜ್ಯದಲ್ಲಿ ಶಾಸನಗಳಿಗೆ ಬಲ ಇಲ್ಲ. ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಸರ್ಕಾರ ತಮ್ಮದೇ ಆದ ಉತ್ತರ ಕೊಡ್ತಿದ್ದಾರೆ ಎಂದು ಆಪಾದನೆ ಮಾಡ್ತಾ ಇದ್ದೇನೆ. ಈ ನೆಲದ ಶಾಸನಕ್ಕೆ ಈ ಸರ್ಕಾರ ಗೌರವ ಹಾಗೂ ಮನ್ನಣೆ ಕೊಡುತ್ತಿಲ್ಲ. ನಮ್ಮ ವಾದವೆಲ್ಲಾ ಗೋರ್ಕಲ್ಲ ಮೇಲೆ ನೀರ್ಗಲ್ ಮಳೆ ಸುರಿದಂತೆ ಸರ್ವಜ್ಞ ಎಂಬಂತೆ ಆಗಿದೆ. ಅವರ ಈ ವಾದವನ್ನು ನಾನು ಒಪ್ಪಿಕೊಳ್ಳಲು ತಯಾರಿಲ್ಲ. ಆದ್ದರಿಂದ ನೊಂದ ಹೃದಯದಿಂದ, ಜನ ಮುಂದೆ ತೀರ್ಮಾನ ಮಾಡುತ್ತಾರೆ ಎಂದು ಜೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ವಿರೋಧ ಪಕ್ಷದ ನಾಯಕರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಬಂಗಾರಪ್ಪ : ಅದು ನಿಮ್ಮ ರಾಜಕೀಯ ಅಂತ ನಾನು ಜೇಳಲೇಬೇಕಾಗಿದೆ. ಉದಾಹರಣೆಗೆ ಆ ಲೀಡರ್‌ಗಳು ಸತ್ತುಹೋಗಿದ್ದರೆ, ಹೊಡೆತ ಬಿದ್ದಿದ್ದರೆ ಮಸಜರ್ ಬರೀತಾ ಇದ್ದೇನೋ ಅಂತನ್ನುವ ಪ್ರಶ್ನೆ ಕೂಡ ಇಲ್ಲಿ ಅಡಗಿದೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಉತ್ತರವನ್ನು ನಾವು ಕೂಲಂಕಷವಾಗಿ ಕೇಳಿದ್ದೇವೆ. ಈ ರಾಜ್ಯದಲ್ಲಿ ನಡೆದ ಹೀಯವಾದ ಕೃತ್ಯವನ್ನು ಅತ್ಯಂತ ಭಯಂಕರವಾದ ರೀತಿಯಲ್ಲಿ ಪ್ರತಿಪಾದಿಸಲು ಹೊರಟಿದಾರೆ. ಅದೇನೆಂದರೆ ಅಡಳಿತ ಪಕ್ಷದವರಿಗೆ